

ಮಿಥಾಲಿ ರಾಜ್




ಜೂಲನ್

ಮಾಡುವ ಪ್ರತಿಭೆಯೂ ಇತ್ತು. ಆದರೆ ಕಾಲ್ಗೆಜ್ಜೆ ತೆಗೆದಿಟ್ಟು ಕ್ರಿಕೆಟ್ ಪ್ಯಾಡ್ ಕಟ್ಟಿಕೊಂಡು ಅಂಗಳಕ್ಕೆ ಬಂದ ಹುಡುಗಿ ಮಹಿಳಾ ಕ್ರಿಕೆಟ್‌ನಲ್ಲಿ ಎತ್ತರಕ್ಕೆ ಬೆಳೆದದ್ದು ಇತಿಹಾಸ.

ಆರು ವಿಶ್ವಕಪ್‌ಗಳಲ್ಲಿ ಆಡಿದ ಆಟಗಾರ್ತಿ ಮಿಥಾಲಿ. ವಿಶ್ವದ ಶ್ರೇಷ್ಠ ಬ್ಯಾಟ್ಸ್‌ವುಮನ್ (ಆರು ಸಾವಿರ ರನ್ ಗಳಿಕೆ) ಅವರೇ ಆಗಿದ್ದಾರೆ. ಅವರ ಆಟದಷ್ಟೇ ಗಟ್ಟಿ ಅವರ ನಿರ್ಧಾರ ಮತ್ತು ನಡವಳಿಕೆ. ಖ್ಯಾತಿಯನ್ನು ಹಿಂಬಾಲಿಸುವ ಅಸೂಯೆ, ಟೀಕೆಗಳ ಅರಿವು ಅವರಿಗೆ ಚೆನ್ನಾಗಿದೆ.

ಕಳೆದ 18 ವರ್ಷಗಳಿಂದ ಅವರು ಮಹಿಳಾ ಕ್ರಿಕೆಟ್‌ನಲ್ಲಿ ಮಿಂಚುತ್ತಿದ್ದ ಅವರತ್ತ ವಾಣಿಜ್ಯ ಬ್ರ್ಯಾಂಡ್‌ಗಳು ಹೆಚ್ಚು ಗಮನ ಹರಿಸಿರಲಿಲ್ಲ. ಆದರೆ ಈಗ ಅವರಿಗೆ ಪ್ರಮುಖ ಬ್ರ್ಯಾಂಡ್‌ಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಅಲ್ಲದೇ ಮಿಥಾಲಿ ಅವರ ಜೀವನ ಕುರಿತ ಚಲನಚಿತ್ರ ನಿರ್ಮಿಸುವ ಸಿದ್ಧತೆಗಳೂ ಆರಂಭವಾಗಿವೆ.

'ಮಹಿಳಾ ಕ್ರಿಕೆಟ್ ಆಟಗಾರ್ತಿಯರಿಗೆ ಬ್ರ್ಯಾಂಡ್ ಮಾರುಕಟ್ಟೆಯಲ್ಲಿ ಈಗ ಬೇಡಿಕೆ ಹೆಚ್ಚಿದೆ. ಪ್ರಮುಖ ಉತ್ಪನ್ನಗಳ ತಯಾರಕರು ತಮ್ಮ ಪ್ರಚಾರಕ್ಕೆ ಮಹಿಳಾ ಕ್ರಿಕೆಟಿಗರನ್ನು ರಾಯಭಾರಿಗಳನ್ನಾಗಿ ನೇಮಕ ಮಾಡಲು ಓಡಾಡುತ್ತಿದ್ದಾರೆ. ಇದು ಬಹಳ ಆಸಕ್ತಿಕರ ಬೆಳವಣಿಗೆ. ಪುರುಷ ಕ್ರಿಕೆಟಿಗರಿಗೆ ಸಾಕಷ್ಟು ಪ್ರಚಾರ ಸಿಗುತ್ತಿದೆ. ಅಲ್ಲದೇ ಅವರಿಗೆ ಬಹಳ ದೊಡ್ಡ ಮೊತ್ತದ ಜಾಹೀರಾತುಗಳೂ ಲಭಿಸುತ್ತಿವೆ. ಅದಕ್ಕೆ ಹೋಲಿಸಿದರೆ ಮಹಿಳೆಯರಿಗೆ ಸಿಗುತ್ತಿರುವುದು ತೀರ ಅತ್ಯಲ್ಪ. ಆದರೂ ಇದು ಒಳ್ಳೆಯ ಬೆಳವಣಿಗೆ. ಅವರ ಜೀವನಗಾಥೆ ಕೂಡ ಹೆಚ್ಚು ಜನಪ್ರಿಯಗೊಳ್ಳುವ ಸಾಧ್ಯತೆ ಇದೆ' ಎಂದು ಚಿತ್ರ ನಿರ್ಮಾಪಕ ವಿನಿಲ್ ಮ್ಯಾಥ್ಯೂ ಹೇಳುತ್ತಾರೆ.

ಭಾರತೀಯ ಸಮಾಜದಲ್ಲಿ ಮಹಿಳೆಯರು ಎದುರಿಸುವ ಸವಾಲುಗಳನ್ನು ಮಿಥಾಲಿ ಕೂಡ ಎದುರಿಸಿದ್ದಾರೆ. ಆದರೆ ಅದಕ್ಕೆ ದಿಟ್ಟವಾಗಿ ತಿರುಗೇಟು ನೀಡಿದ್ದಾರೆ. ಇತ್ತೀಚೆಗೆ ಅವರು ಸಮಾರಂಭದಲ್ಲಿ ಜಗಮಗಿಸುವ ಉಡುಪು ಧರಿಸಿ ಭಾಗವಹಿಸಿದ್ದರು. ಆದರೆ ಅವರ ಕಂಕುಳಲ್ಲಿದ್ದ ಬೆವರಿನ ಕುರಿತು ಟ್ವಿಟರ್‌ನಲ್ಲಿ ಲೇವಡಿ ಮಾಡಿದ್ದ ಕಿಡಿಗೇಡಿಗಳಿಗೆ ಅವರು ತಿರುಗೇಟು ನೀಡಿದ್ದರು. 'ಈ ಬೆವರಿನಿಂದ (ಶ್ರಮ) ನಾನು ಇವತ್ತು ಇಲ್ಲಿದ್ದೇನೆ. ಕ್ರೀಡಾಂಗಣದಲ್ಲಿದ್ದಾಗ ಬೆವರು ಹರಿಸುವುದು ನನಗೆ ಹೊಸದಲ್ಲ. ಇಲ್ಲಿ ಕ್ರಿಕೆಟ್ ಅಕಾಡೆಮಿ ಉದ್ಘಾಟಿಸಲು ಬಂದಿದ್ದೇನೆ. ಅದಕ್ಕಾಗಿ ನಾನು ಮುಜುಗರಪಡಬೇಕಿಲ್ಲ' ಎಂದು ರಿಟ್ವೀಟ್ ಮಾಡಿದ್ದರು. ಇದಕ್ಕೆ ಹಲವರು ಅವರಿಗೆ ಬೆಂಬಲ ವ್ಯಕ್ತಪಡಿಸಿದ್ದರು.

ಇನ್ನೊಂದು ಬಾರಿ ಅವರು ಧರಿಸಿದ್ದ ಆಧುನಿಕ ಮಾದರಿಯ ಪೋಷಾಕು ಕುರಿತು ಕೆಲವರು ಆಕ್ಷೇಪ ವ್ಯಕ್ತಪಡಿಸಿದ್ದರು. ಆಗಲೂ ಅವರು ತಮ್ಮ ಪ್ರತ್ಯುತ್ತರದ ಬ್ಯಾಟ್ ಬೀಸಿದ್ದರು.

## ಜೂಲನ್ ಯಶೋಗಾಥೆ

'ನೀನು ತುಂಬಾ ನಿಧಾನವಾಗಿ ಬೌಲಿಂಗ್ ಮಾಡ್ತಿ. ಎದುರಾಳಿ ತಂಡಕ್ಕೆ ಹೆಚ್ಚು ರನ್ ನೀಡಿ ನಾವು ಸೋಲುವಂತೆ ಮಾಡುತ್ತಿ. ಬರೀ ಬ್ಯಾಟಿಂಗ್, ಫೀಲ್ಡಿಂಗ್ ಮಾಡು ಸಾಕು'–

ಪಶ್ಚಿಮ ಬಂಗಾಳದ ಪುಟ್ಟ ಊರು ಚಕ್ದಾದಲ್ಲಿ 22 ವರ್ಷಗಳ ಹಿಂದೆ ಇಂತಹ ಬಿರುನುಡಿಗಳನ್ನು ಹೇಳಿದ್ದ ಆ ಹುಡುಗ ಇವತ್ತು ಎಲ್ಲಿದ್ದಾನೋ ಗೊತ್ತಿಲ್ಲ. ಆದರೆ ಆ ಮಾತುಗಳಿಂದ ಕಣ್ಣಾಲಿಗಳನ್ನು ತುಂಬಿಕೊಂಡು ಟೆನಿಸ್ ಚೆಂಡನ್ನು ಆ ಹುಡುಗನಿಗೆ ಮರಳಿಸಿದ್ದ ಹುಡುಗಿ ಮಾತ್ರ ಈಗ ಮಹಿಳಾ ಕ್ರಿಕೆಟ್ ಲೋಕದ ಶ್ರೇಷ್ಠ ಮಧ್ಯಮವೇಗದ ಬೌಲರ್ ಆಗಿದ್ದಾರೆ. ಅವರೇ ಜೂಲನ್ ಗೋಸ್ವಾಮಿ.

ವನಿತೆಯರ ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್‌ನಲ್ಲಿ ಒಟ್ಟು 181 ವಿಕೆಟ್‌ಗಳನ್ನು ಗಳಿಸಿ ವಿಶ್ವದಾಖಲೆ ಬರೆದಿದ್ದಾರೆ. ಅತಿ ಹೆಚ್ಚು ವಿಕೆಟ್ ಪಡೆದ ವಿಶ್ವದ ಬೌಲರ್ ಆಗಿದ್ದಾರೆ. ದಶಕದ ಹಿಂದೆ ಆಸ್ಟ್ರೇಲಿಯಾದ ಆಟಗಾರ್ತಿ ಕ್ಯಾಥರಿನ್ ಫಿಟ್ಜ್‌ಪ್ಯಾಟ್ರಿಕ್ ಅವರ 180 ವಿಕೆಟ್ ಗಳಿಕೆ ಸಾಧನೆಯನ್ನು ಮೀರಿ ನಿಂತರು. ಕ್ಯಾಥರಿನ್ ಅವರು 103 ಪಂದ್ಯಗಳಲ್ಲಿ ಆ ಸಾಧನೆ ಮಾಡಿದ್ದರು. ಜೂಲನ್ ಆ ಸಾಧನೆಗಾಗಿ 153 ಪಂದ್ಯಗಳನ್ನು ಆಡಿದರು.